# ಅತಿಥಿ ಉಪನ್ಯಾಸಕರ ಆಯ್ಕೆಯ ಮಾನದಂಡಗಳು

1. ಅಭ್ಯರ್ಥಿಗಳು ಯಾವುದಾದರೂ ಪದವಿ ಕುರಿತು ಮಾಹಿತಿ ತಪ್ಪಾಗಿ ನೀಡಿದ್ದಲ್ಲಿ ಅಥವಾ ಮೂಲ ದಾಖಲೆಗಳನ್ನು ಪರಿಶೀಲನೆಗೆ ಸಲ್ಲಿಸಲು ವಿಫಲರಾದಲ್ಲಿ ಅವರ ಅಂಕಗಳನ್ನು (re-assess) ಮಾಡಿ ಪರಿಷ್ಕೃತ ಅಂಕಗಳನ್ನು ನಿರ್ಧರಿಸಲಾಗುವುದು. ಅಭ್ಯರ್ಥಿಯ ಪರಿಷ್ಕೃತ ಅಂಕಗಳ ಮೆರಿಟ್ ಪ್ರಕಾರ ಅವಕಾಶ ನೀಡಲಾಗುವುದು ಹಾಗೂ ಇಂತಹ ಪ್ರಕರಣಗಳ ಕುರಿತಂತೆ ದಾಖಲೆಗಳನ್ನು ನಿರ್ವಹಿಸಲಾಗುವುದು.
2. ಆಯ್ಕೆ ಸಮಯದಲ್ಲಿ ಅರ್ಹತೆಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸದ ಅಥವಾ ಅರ್ಹತಾ ಪದವಿಯನ್ನು ಪೂರ್ಣಗೊಳಿಸದಿರುವ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.
3. ಅತಿಥಿ ಉಪನ್ಯಾಸಕರ ಅಗತ್ಯವಿಲ್ಲದಿರುವ ವಿಷಯಗಳಿಗೆ ಅರ್ಜಿಯನ್ನು ಸಲ್ಲಿಸಿದ ಪಕ್ಷದಲ್ಲಿ, ಅಂತಹ ಅರ್ಜಿಗಳನ್ನು ಪರಿಗಣಿಸಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳುವ ಅಗತ್ಯವಿಲ್ಲದಿರುವುದರಿಂದ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
4. ಅತಿಥಿ ಉಪನ್ಯಾಸಕರು ಒಂದಕ್ಕಿಂತ ಹೆಚ್ಚು ಅರ್ಜಿಯನ್ನು ವಿಭಿನ್ನ ಕೋಡ್ ಬಳಸಿ ಸಲ್ಲಿಸಿದಲ್ಲಿ, ಅಂತಹ ಸಂದರ್ಭದಲ್ಲಿ ಅಭ್ಯರ್ಥಿಯೊಂದಿಗೆ ದೂರವಾಣಿ ಮೂಲಕ ಸಂಪರ್ಕಿಸಿ ತಪ್ಪಿರುವ ಅರ್ಜಿಯನ್ನು ತಿರಸ್ಕರಿಸಲಾಗುವುದು.
5. ಪ್ರತಿಯೊಂದು ವಿಷಯದಲ್ಲಿ ಕಾರ್ಯಭಾರವನ್ನು ಗಣನೆಗೆ ತೆಗೆದುಕೊಳ್ಳುವಾಗ ಎಲ್ಲಾ allied/related ವಿಷಯಗಳ ಕಾರ್ಯಭಾರವನ್ನು ಪರಿಗಣಿಸಲಾಗುವುದು.
6. ಕೆಲವು ಸಮಾನಾಂತರ ವಿಷಯಗಳಲ್ಲಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಪ್ರತಿಭಾ ಪಟ್ಟಿಯನ್ನು ಒಟ್ಟಿಗೆ ಸೇರಿಸಿ ಪ್ರಕಟಿಸಲಾಗುವುದು.
7. ಕಾಲೇಜುಗಳಲ್ಲಿ ಸ್ನಾತಕೋತ್ತರ ವಿಭಾಗ ಹಾಗೂ ಸ್ನಾತಕ ವಿಭಾಗಗಳಲ್ಲಿ ಬೋಧಿಸುವ ಕಡ್ಡಾಯ ವಿಷಯಗಳಾದ ಭಾರತ ಸಂವಿಧಾನ, ಪರಿಸರ ಅಧ್ಯಯನ ಮುಂತಾದ ವಿಷಯಗಳಲ್ಲಿ ಯಾರು ಯಾವ ವಿಷಯಗಳನ್ನು ಬೋಧಿಸಬೇಕೆಂಬ ಬಗ್ಗೆ ವಿಶ್ವವಿದ್ಯಾನಿಲಯದ ಆದೇಶದನ್ವಯ ಕ್ರಮ ವಹಿಸಲಾಗುವುದು.

22/05

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು